ಬಿಡುಗಡೆಗೊಳಿಸಲಾಗಿದ್ದು, ಆದ್ಯತೆ ಮೇರೆಗೆ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಸೇತುವೆ ಕಾಮಗಾರಿ ಸ್ಥಗಿತಗೊಂಡಿರುವುದು

657(1151) ಶ್ರೀ ಸುರೇಶ್ ಬಾಬು ಸಿ ಬಿ:(ಚಿಕ್ಕನಾಯಕನಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಹಾಗಲವಾಡಿಗೆ ಹೊಗುವ ರಸ್ತೆಯಲ್ಲಿ ಅಜ್ಜಿಗುಡ್ಡೆ ಗ್ರಾಮದ ಸಮೀಪ ಸೇತುವೆ ನಿರ್ಮಾಣ ಕಾಮಗಾರಿ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಾಮಗಾರಿ ಸ್ಥಗಿತಗೊಳ್ಳಲು ಕಾರಣವೇನು; ಈ ಕಾಮಗಾರಿಯನ್ನು ಯಾವಾಗ ಪುನರಾಂಭಿಸಲಾಗುವುದು;

ಇ) ಈ ಕಾಮಗಾರಿಗೆ ಇದುವರೆವಿಗೆ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ಹಾಗೂ ಅಂದಾಜು ವೆಚ್ಚ ಎಷ್ಟು(ಪೂರ್ಣ ಮಾಹಿತಿ ನೀಡುವುದು)?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ 3054 (ಯೋಜನೆ) ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಅಡಿಯಲ್ಲಿ ಕೈಗೊಳ್ಳಲಾಗಿದ್ದು ಸುತ್ತೋಲೆ ದಿನಾಂಕ 31-08-2009ರಲ್ಲಿ ಸದರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಹಾಳಿ ಯಥಾಸ್ಥಿತಿಯಲ್ಲಿಯೇ ಮುಕ್ತಾಯಗೊಳಿಸಲು ಸೂಚಿಸಿದ ಮೇರೆಗೆ ದಿನಾಂಕ 31-08-2009ರ ಅಂತ್ಯಕ್ಕೆ ಅಬಟ್‌ಮೆಂಟ್ ಕ್ಯಾಪ್‌ವರೆಗೆ ನಿರ್ವಹಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಯಿತು.

ಸದರಿ ಸೇತುವೆಯ ಉಳಿದ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಸೇತುವೆಯ ಉಳಿದ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಸುವರ್ಣ ರಸ್ತೆ ಯೋಜನೆ ಕಾಯಕ್ರಮದಡಿ ಚಿಕ್ಕನಾಯಕನಹಳ್ಳಿ-ಹಾಗಲವಾಡಿ ರಸ್ತೆ ವಿವಿಧ ಸರಪಳಿಗಳ

ಅಭಿವೃದ್ಧಿ ಕಾಮಗಾರಿಯಲ್ಲಿ ರೂ.8.72 ಲಕ್ಷಗಳಿಗೆ ಸೇರ್ಪಡೆ ಮಾಡಿದ್ದು ಪ್ರಸಕ್ತ ಸಾಲಿನಲ್ಲಿ ಸೇತುವೆ ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು.

ಇ) ಈ ಕಾಮಗಾರಿಗೆ ಇದುವರೆಗೂ 75,414 ರೂ.ಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಕಾಮಗಾರಿಯ ಅಂದಾಜು ವೆಚ್ಚ ರೂ.21.40 ಲಕ್ಷಗಳು.

ರಸ್ತೆಗಳ ದುರಸ್ತಿ

658(750) ಶ್ರೀ ತುಕಾರಾಮ್ ಇ:(ಸಂಡೂರ್) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿ 49 ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆ ಸಂಪೂರ್ಣ ಹದಗೆಟ್ಟು, ಬಸ್ಸುಗಳ ಸಂಚಾರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗೆಯೇ ರಾಜ್ಯ ಹೆದ್ದಾರಿ 40 ರಲ್ಲಿ ಬರುವ ಸಂಡೂರು–ಕೂಡ್ಲಿಗೆ ಹಾಗೂ ಸಂಡೂರು–ತೋರಣಗಲ್ಲು ರಸ್ತೆಗಳು ಹದಗೆಟ್ಟು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮಾನ್ಯ ಮಂತ್ರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಕಳೆದ ಅಧಿವೇಶನದಲ್ಲಿ ಭರವಸೆ ನೀಡಿದ್ದು, ಇದುವರೆಗೂ ಕಾರ್ಯರೂಪಕ್ಕೆ ಬರದೆ ಇರುವುದಕ್ಕೆ ಕಾರಣಗಳೇನು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ರಾಜ್ಯ ಹೆದ್ದಾರಿ 40 ರಲ್ಲಿ ಬರುವ ಸಂಡೂರು–ಕೂಡ್ಲಿಗಿ ಹಾಗೂ ಸಂಡೂರು–ತೋರಣಗಲ್ಲು ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಯಾವುದೇ ತೊಂದರೆ ಇರುವುದಿಲ್ಲ.

ಇ) ರಾಜ್ಯ ಹೆದ್ದಾರಿ–40 ಹಾಗೂ ರಾಜ್ಯ ಹೆದ್ದಾರಿ–49 ರ ರಸ್ತೆ ಸುಧಾರಣೆಗೆ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಬಿ.ಓ.ಟಿ. ಆಧಾರದ ಮೇಲೆ ದಿನಾಂಕ: 8.4.2010 ರಂದು ಟೆಂಡರ್‌ಗಳನ್ನು ಕರೆಯಲಾಗಿದ್ದು, ರಾಜ್ಯ ಹೆದ್ದಾರಿ–49ರಲಿ ಬರುವ ಸಂಡೂರು–ಹೊಸಪೇಟೆ ಭಾಗದಲ್ಲಿ 27.00 ಕಿಮೀ ಉದ್ದದ ರಸ್ತೆಯನ್ನು ರೂ. 72.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಹಾಗೂ ರಾಜ್ಯ ಹೆದ್ದಾರಿ–40 ರಲ್ಲಿ ಬರುವ ಸಂಡೂರು– ಕೂಡ್ಲಿಗಿ ಹಾಗೂ ಸಂಡೂರು–